# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2166
2 ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
3 ಉತ್ತರಿಸುವ ದಿನಾಂಕ : 18-03-2022
4 ಉತ್ತರಿಸುವವರು : ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳನ್ನು ತೆರೆಯಲು ಇರುವ ನಿಯಮಗಳೇನು; ಹಾಗೂ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಸದರಿ ಕೇಂದ್ರಗಳನ್ನು ಸ್ಥಾಪಿಸಲು ದೊರೆಯುತ್ತಿರುವ ನೆರವು, ಸಾಲ ಸಹಾಯಧನ, ಪ್ರೋತ್ಸಾಹಧನ ಹಾಗೂ ಇತರೆ ಸೌಲಭ್ಯಗಳೇನು; (ಆದೇಶಗಳ ಪ್ರತಿ ನೀಡುವುದು) | ರಾಜ್ಯದಲ್ಲಿ ಖಾಸಗಿ ರೇಷ್ಮೆ ಚಾಕಿ ಸಾಕಾಣಿಕೆ ಕೇಂದ್ರ ತೆರೆಯಲು ಫಲಾನುಭವಿಯು ಕೇಂದ್ರ ರೇಷ್ಮೆ ಮಂಡಳಿಯಲ್ಲಿ ನೊಂದಣಿ ಮಾಡಿಕೊಳ್ಳಬೇಕು.<br><br>ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರವನ್ನು ತೆರೆಯಲು ಇಚ್ಛಿಸುವ ಫಲಾನುಭವಿ ಮಾನ್ಯತೆ ಪಡೆದ ರಾಜ್ಯ/ಕೇಂದ್ರ ರೇಷ್ಮೆ ತರಬೇತಿ ಸಂಸ್ಥೆಯಲ್ಲಿ 3 ತಿಂಗಳ ಅವಧಿಗೆ ಚಾಕಿ ಸಾಕಾಣಿಕೆ ಬಗ್ಗೆ ತರಬೇತಿಯನ್ನು ಪಡೆಯಬೇಕು.<br><br>ಫಲಾನುಭವಿಗೆ ಕನಿಷ್ಠ 2 ಎಕರೆ ಸ್ವಂತ ಅಥವಾ ಗುತ್ತಿಗೆ ಆಧಾರದ ಮೇಲೆ ನೀರಾವರಿವುಳ್ಳ ಹಿಪ್ಪುನೇರಳೆ ಚಾಕಿ ತೋಟವಿದ್ದು ಹನಿ ನೀರಾವರಿ ಅಳವಡಿಸಿರಬೇಕು. ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸಬೇಕು.<br><br>5000 ರೋಗ ರಹಿತ ಮೊಟ್ಟೆಗಳನ್ನು ಚಾಕಿ ಕಟ್ಟುವುದಕ್ಕೆ (42 X 30 X 16) 1260 ಚದರಡಿ ಚಾಕಿ ಸಾಕಾಣಿಕಾ ಕಟ್ಟಡವನ್ನು ಚಾಕಿ ತೋಟದಲ್ಲಿಯೇ ನಿರ್ಮಿಸಿರಬೇಕು.<br><br>ವಾರ್ಷಿಕ 1.50 ರಿಂದ 1.60 ಲಕ್ಷ ದ್ವಿತಳಿ ಮೊಟ್ಟೆ ಚಾಕಿ ಕಟ್ಟುವ ಸಾಮರ್ಥ್ಯತೆಯಿರಬೇಕು. ಪ್ರತಿ ತಂಡಕ್ಕೆ 5 ಸಾವಿರ ಮೊಟ್ಟೆಗಳಂತೆ ವರ್ಷಕ್ಕೆ 32 ತಂಡಗಳಲ್ಲಿ ಚಾಕಿ ಮಾಡುವ ಸಾಮರ್ಥ್ಯ ಇರಬೇಕು.<br><br>ಚಾಕಿ ಸಾಕಾಣಿಕೆಗೆ ಅಗತ್ಯವಾದ ಎಲ್ಲಾ ಸಲಕರಣೆಗಳನ್ನು ಖರೀದಿಸಬೇಕು.<br>ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದೊಂದಿಗೆ ರೇಷ್ಮೆ ಇಲಾಖೆಯು ಕೇಂದ್ರ ಪುರಸ್ಕೃತ "ಸಿಲ್ಕ್ ಸಮಗ್ರ" ಯೋಜನೆಯಡಿ ಹೊಸದಾಗಿ ಸ್ಥಾಪಿಸಿರುವ ನೋಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಹಿಪ್ಪುನೇರಳೆ ತೋಟ ಸ್ಥಾಪನೆ, ನಿರ್ವಹಣೆ, ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣ ಮತ್ತು ಚಾಕಿ ಸಾಕಾಣಿಕಾ ಸಲಕರಣೆ ಖರೀದಿಗೆ (ಮೂರು ಘಟಕಗಳು ಸೇರಿ) ಸಹಾಯಧನ ನೀಡುವ |

| | | |
|---|---|---|
| | | ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಪ್ರಸ್ತುತ ಘಟಕ ದರ ರೂ.12.00 ಲಕ್ಷಗಳನ್ನು ನಿಗದಿಪಡಿಸಿದ್ದು, ಸಹಾಯಧನ ಸಾಮಾನ್ಯ ವರ್ಗಕ್ಕೆ ಶೇ.75 ರಷ್ಟು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಶೇ.90 ರಷ್ಟು ಸಹಾಯಧನ ನೀಡಲಾಗುವುದು.<br><br>ಫಲಾನುಭವಿಯು ಸಹಾಯಧನದ ಪ್ರಸ್ತಾವನೆಯನ್ನು ಮಾರ್ಗಸೂಚಿಯ ರೀತ್ಯಾ ಅಗತ್ಯ ದಾಖಲಾತಿಗಳೊಂದಿಗೆ ರೇಷ್ಮೆ ವಿಸ್ತರಣಾಧಿಕಾರಿಗಳು, ರೇಷ್ಮೆ ಸಹಾಯಕ ನಿರ್ದೇಶಕರು, ರೇಷ್ಮೆ ಉಪನಿರ್ದೇಶಕರು ಮತ್ತು ರೇಷ್ಮೆ ಜಂಟಿ ನಿರ್ದೇಶಕರವರ ಮೂಲಕ ಸಮುಚಿತ ಮಾರ್ಗದಲ್ಲಿ ರೇಷ್ಮೆ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ, ನಿಗದಿಪಡಿಸಿರುವ ಮಾರ್ಗಸೂಚಿ ಯ ಪ್ರಕಾರ ಸಹಾಯಧನಕ್ಕೆ ಅರ್ಹರಿದ್ದಲ್ಲಿ ಮಾತ್ರ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಸಹಾಯಧನವನ್ನು ನೀಡಲಾಗುವುದು. ಸುತ್ತೋಲೆ ಹಾಗೂ ಮಾರ್ಗಸೂಚಿಯನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ | ರಾಜ್ಯದಲ್ಲಿ, ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳನ್ನು ಈಗಾಗಲೇ ಪ್ರಾರಂಭಿಸಿರುವ ಎಷ್ಟು ಜನರು, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ದೊರೆಯುತ್ತಿರುವ ನೆರವು, ಸಾಲ, ಸಹಾಯಧನ, ಪ್ರೋತ್ಸಾಹಧನ ಹಾಗೂ ಇತರೆ ಸೌಲಭ್ಯಗಳನ್ನು ಇದುವರೆಗೆ ಪಡೆದಿದ್ದಾರೆ; (ಹೆಸರು ಹಾಗೂ ವಿಳಾಸ ಸಹಿತ ಪಡೆದಿರುವ ಸೌಲಭ್ಯಗಳ ಸಂಪೂರ್ಣ ವಿವರ ನೀಡುವುದು) | ಸದರಿ ಯೋಜನೆಯಡಿ ನೋಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳ ಸ್ಥಾಪನೆಗೆ ಸಹಾಯಧನ ನೀಡಿರುವ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ. |
| ಇ | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳು, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಸೌಲಭ್ಯ ಪಡೆಯಲು ಈಗಾಗಲೇ ಸಲ್ಲಿಸಿರುವ ಅರ್ಜಿಗಳು ಇನ್ನೂ ಬಾಕಿ ಉಳಿದಿದೆ; (ಹೆಸರು ಹಾಗೂ ವಿಳಾಸ ಸಹಿತ ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರಗಳು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಸೌಲಭ್ಯ ಪಡೆಯಲು ಸಲ್ಲಿಸಿರುವ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ |

| | | |
|---|---|---|
| ಈ | ಈ ರೀತಿ ದೀರ್ಘಕಾಲದಿಂದ ಸದರಿ ಅರ್ಜಿಗಳು ಬಾಕಿ ಉಳಿಯಲು ಕಾರಣಗಳೇನು; ಯಾವ ಕಾಲಮಿತಿಯೊಳಗೆ ಇವರಿಗೆ ಸಹಾಯಧನ ನೀಡಲಾಗುವುದು; ಇವರಿಗೆ ಸಹಾಯಧನ ನೀಡಲು ಪ್ರಸ್ತುತ ಎಷ್ಟು ಅನುದಾನ ಬೇಕಾಗಿದೆ ? | ಅನ್ವಯಿಸುವುದಿಲ್ಲ. |

ಸಂಖ್ಯೆ:ರೇಷ್ಮೆ 62 ರೇಕೃವಿ 2022

(ಡಾ. ನಾರಾಯಣಗೌಡ)
ರೇಷ್ಮೆ ಹಾಗೂ ಯುವ ಸಬಲೀಕರಣ
ಮತ್ತು ಕ್ರೀಡಾ ಸಚಿವರು

ಸುತ್ತೋಲೆ

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

ಸಂ:ಯೋಜನೆ/ಪಿಎಸ್1/ಯೋಕಾ/ಮಾರ್ಗಸೂಚಿ/7/2021-22 ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ,
ಬೆಂಗಳೂರು, ದಿನಾಂಕ:23.04.2021.

## ಸುತ್ತೋಲೆ

ವಿಷಯ: 2021-22ನೇ ಸಾಲಿನಲ್ಲಿ ಫಲಾನುಭವಿ ಆಧಾರಿತ ವಿವಿಧ ಯೋಜನಾ ಲೆಕ್ಕಶೀರ್ಷಿಕೆಗಳಡಿ ಕಾರ್ಯಕ್ರಮಗಳ ಅನುಷ್ಠಾನದ ಮಾರ್ಗಸೂಚಿ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ರೇಷ್ಮೆ/43/ರೇಕೃವಿ/2021, ಬೆಂಗಳೂರು, ದಿನಾಂಕ:16.04.2021.

*****

2021-22ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಯೋಜನೆಗಳ ಲೆಕ್ಕಶೀರ್ಷಿಕೆಗಳಡಿ ಸರ್ಕಾರವು ಅನುದಾನವನ್ನು ಒದಗಿಸಿದ್ದು, ಮುಂದುವರೆದ ಯೋಜನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಫಲಾನುಭವಿ ಆಧಾರಿತ ಯೋಜನೆಗಳಾದ "ರೇಷ್ಮೆ ಅಭಿವೃದ್ಧಿ ಯೋಜನೆ - **ಲೆಕ್ಕ ಶೀರ್ಷಿಕೆ 2851-00-107-1-35(106)** ಅಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು, ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಹಾಗೂ ಭಾಗೀದಾರರಿಗೆ ಸವಲತ್ತು ಯೋಜನೆ - **ಲೆಕ್ಕ ಶೀರ್ಷಿಕೆ 2851-00-107-1-48(106)** ಅಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಹಾಗೂ ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು ಯೋಜನೆ - **ಲೆಕ್ಕ ಶೀರ್ಷಿಕೆ 2851-00-107-1-51(106)** ಅಡಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ" ಮಾರ್ಗಸೂಚಿಯನ್ನು ತಯಾರಿಸಿದ್ದು, ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ ಸದರಿ ಮಾರ್ಗಸೂಚಿಯನ್ವಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸೂಚಿಸಿದೆ.

ರೇಷ್ಮೆ ನಿರ್ದೇಶನಾಲಯದಿಂದ ವಿವಿಧ ಫಲಾನುಭವಿ ಆಧಾರಿತ ಯೋಜನೆಗಳಡಿ ಜಿಲ್ಲಾವಾರು ನಿಗಧಿಪಡಿಸುವ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ಸಾಧಿಸಲು ಕ್ರಮವಹಿಸುವುದು. 2021-22ನೇ

ಸಾಲಿನಲ್ಲಿ ಒದಗಿಸುವ ಅನುದಾನಕ್ಕನುಗುಣವಾಗಿ ಮಾಹೆವಾರು ಭರಿಸುವ ವೆಚ್ಚದ ಮಾಹಿತಿಯನ್ನು ಎನ್‌ಡಿಎಸ್‌ಎಸ್‌ನಲ್ಲಿ ತಪ್ಪದೇ ದಾಖಲಿಸುವುದು ಹಾಗೂ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ತಯಾರಿಸಿ ಯೋಜನಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಇವರಿಗೆ,
ಎಲ್ಲಾ ರೇಷ್ಮೆ ಜಂಟಿ ನಿರ್ದೇಶಕರು
ಎಲ್ಲಾ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕುಣಿಗಲ್/ಮಾಗಡಿ.
ರೇಷ್ಮೆ ಉಪನಿರ್ದೇಶಕರು, ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ವಿಜಯಪುರ/ರಾಮನಗರ/ಕನಕಪುರ/ಕೊಳ್ಳೇಗಾಲ/ಕೋಲಾರ/ಸಿದ್ಲಘಟ್ಟ.
ಎಲ್ಲಾ ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರು.
ಎಲ್ಲಾ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನ ನಂತರದ ಚಟುವಟಿಕೆಗಳು.
ಎಲ್ಲಾ ರೇಷ್ಮೆ ವಿಸ್ತರಣಾಧಿಕಾರಿಗಳು, ತಾಂತ್ರಿಕ ಸೇವಾ ಕೇಂದ್ರ/ತಾಂತ್ರಿಕ ಸೇವಾ ಕೇಂದ್ರ(ರೀಲಿಂಗ್)
ಪ್ರತಿಯನ್ನು, ರೇಷ್ಮೆ ಜಂಟಿ ನಿರ್ದೇಶಕರು, ಎಸ್‌ಪಿಎಸ್‌ಎಫ್ ವಿಭಾಗ/ಟಿಎಸ್‌ಟಿಪಿ ವಿಭಾಗ/ರೇಷ್ಮೆ ಗೂಡು ಮಾರುಕಟ್ಟೆ ಹಾಗೂ ಗೂಡಿನ ನಂತರದ ಚಟುವಟಿಕೆಗಳು ವಿಭಾಗ, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
ಪ್ರತಿಯನ್ನು, ಮುಖ್ಯ ಅರ್ಥಶಾಸ್ತ್ರಜ್ಞರು, ರೇಷ್ಮೆ ನಿರ್ದೇಶನಾಲಯ, ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಮಾರ್ಗಸೂಚಿಗಳು.

# 2021-22ನೇ ಸಾಲಿನ ರೇಷ್ಮೆ ಅಭಿವೃದ್ಧಿ ಯೋಜನೆ
# ಲೆಕ್ಕಶೀರ್ಷಿಕೆ 2851-00-107-1-35(106)(ಸಾಮಾನ್ಯ)
# ಕಾರ್ಯಕ್ರಮಗಳ ಮಾರ್ಗಸೂಚಿ

ಕಾರ್ಯಕ್ರಮ : 4

**ನೊಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆಗೆ – ಚಾಕಿ ತೋಟ ಸ್ಥಾಪನೆ/ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನ**

ರೇಷ್ಮೆ ಬೆಳೆ, ಯಶಸ್ಸು ಚಾಕಿ ಹುಳು ಸಾಕಾಣಿಕೆ ನಿರ್ವಹಣೆಯನ್ನು ಆಧರಿಸಿದೆ. ಅಸಮರ್ಪಕ ಚಾಕಿ ನಿರ್ವಹಣೆ ಬೆಳೆ ನಾಶಕ್ಕೆ ದಾರಿಯಾಗುವುದೆಂಬ ಕಾರಣಕ್ಕೆ ರೇಷ್ಮೆ ಬೆಳೆಗಾರರಿಗೆ ವೈಯಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು (NGO) / ಸ್ವ ಸಹಾಯ ಗುಂಪುಗಳು(SHG) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO)ಗಳಿಗೂ ಸ್ವಂತ ಅಥವಾ ಗುತ್ತಿಗೆ ಆಧಾರದ (ಕನಿಷ್ಠ 10 ವರ್ಷಗಳವರೆಗೆ) ಜಮೀನಿನಲ್ಲಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ಅವಕಾಶ ಕಲ್ಪಿಸಿದೆ. ಇದರ ಘಟಕ ದರ ರೂ.12.00ಲಕ್ಷ. ಸಹಾಯಧನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಘಟಕದರ | ಸಹಾಯಧನ ಸಾಮಾನ್ಯ (75%) |
|---|---|
| 12.00 | 9.00 |

ಕೇಂದ್ರ ರೇಷ್ಮೆ ಮಂಡಳಿಯವರು ಘಟಕ ದರ / ಸಹಾಯಧನಗಳನ್ನು ಹೆಚ್ಚಿಸಿದ್ದು ಇಲಾಖೆಯಲ್ಲಿಯೂ ಸದರಿ ಘಟಕ ದರ / ಸಹಾಯಧನಗಳ ಅಳವಡಿಕೆಗೆ ಸಂಬಂಧಿಸಿದಂತೆ ಘಟಕ ದರ / ಸಹಾಯಧನಗಳನ್ನು ಪರಿಷ್ಕರಿಸಲಾಗಿರುತ್ತದೆ. ಸರ್ಕಾರದ ಆದೇಶ ತೋಇ/04/ರೇಕೃವಿ/2018, ದಿನಾಂಕ 10.10.2018, ಇದರಂತೆ ಅನುಷ್ಠಾನಗೊಳಿಸಲಾಗುವುದು.

1. ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಕ್ಕೆ ಸಹಾಯಧನ ಪಡೆಯಲು ಇಚ್ಚಿಸುವವರು ಕೇಂದ್ರ ರೇಷ್ಮೆ ಮಂಡಳಿಯ ಕಾಯಿದೆ ಪ್ರಕಾರ ದ್ವಿತಳಿ ಚಾಕಿ ಸಾಕಾಣಿಕೆ ಮಾಡಲು ನೊಂದಾಯಿತರಾಗಿರುವ ಬಗ್ಗೆ ದೃಢೀಕರಣ ನೀಡಬೇಕು. ಚಾಕಿ ಸಾಕಾಣಿಕೆ ಕೇಂದ್ರವು ಪ್ರೌಢ ಹುಳು ಸಾಕಾಣಿಕೆ ಮನೆಗಳಿಂದ ದೂರವಿರಬೇಕು, ಚಾಕಿ ತೋಟದಲ್ಲಿಯೇ ಕಟ್ಟಡವಿರಬೇಕು ಮತ್ತು ಸಿ.ಡಿ.ಪಿ ಮ್ಯಾನುಯಲ್ ಪ್ರಕಾರ ನಿಗದಿತ ಮಾದರಿ ನಕ್ಷೆಯಂತಿರಬೇಕು(ನಕ್ಷೆ ಅಡಕಗೊಳಿಸಿದೆ).

2. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಪ್ರಾರಂಭಿಸುವವರು ವೈಯುಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(NGO)/ ಸ್ವಸಹಾಯ ಗುಂಪುಗಳು(SHG ಕನಿಷ್ಠ 10 ಜನ ಸದಸ್ಯರುಳ್ಳ) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO)/FPOಗಳು ಸ್ವಂತ ಅಥವಾ ಗುತ್ತಿಗೆ ಆಧಾರದಲ್ಲಿ(ಕನಿಷ್ಠ 10ವರ್ಷಗಳವರೆಗೆ) ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ಮುಂದಾಗುವವರ ಅರ್ಜಿಗಳನ್ನು ವಲಯಾಧಿಕಾರಿಗಳು ಸಂಗ್ರಹಿಸಿ ಶಿಫಾರಸ್ಸು ಮಾಡಿ ಸಹಾಯಧನಕ್ಕೆ ಪರಿಗಣಿಸಲು ತಾಂತ್ರಿಕ ಸೇವಾ ಕೇಂದ್ರಗಳಿಗೆ ಸಲ್ಲಿಸಬೇಕು.

3. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಪ್ರಾರಂಭಿಸುವವರು ವೈಯುಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು (NGO) / ಸ್ವ ಸಹಾಯ ಗುಂಪುಗಳು(SHG ಕನಿಷ್ಠ 10 ಜನ ಸದಸ್ಯರುಳ್ಳ) ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು(CBO)/FPOಗಳು ಸ್ವಂತ ಅಥವಾ ಗುತ್ತಿಗೆ ಆಧಾರದಲ್ಲಿ (ಕನಿಷ್ಠ 10 ವರ್ಷಗಳವರೆಗೆ) ಚಾಕಿ ಸಾಕಾಣಿಕೆ ಕೈಗೊಳ್ಳಲು ಮುಂದಾಗುವವರಿಗೆ ರಾಜ್ಯ / ಕೇಂದ್ರ ರೇಷ್ಮೆ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಹೊಂದಿದ ಬಗ್ಗೆ ದೃಢೀಕರಣವಿರಬೇಕು.

4. ಗುರುತಿಸಿದ ಕ್ಲಸ್ಟರ್‌ಗಳಲ್ಲಿ ಸ್ಥಾಪಿಸಿದ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರಗಳಿಗೆ ಸಹಾಯಧನ ನೀಡಲು ಪ್ರಾಶಸ್ತ್ಯತೆ ನೀಡಲಾಗುವುದು.

5. ಫಲಾನುಭವಿಗೆ ಕನಿಷ್ಠ 2 ಎಕರೆ ಸ್ವಂತ ಅಥವಾ ಗುತ್ತಿಗೆ ಆಧಾರದ ಮೇಲೆ ಪಡೆದ ನೀರಾವರಿವುಳ್ಳ ಹಿಪ್ಪುನೇರಳೆ ಚಾಕಿ ತೋಟವಿದ್ದು, ಚಾಕಿ ತೋಟಕ್ಕೆ ಕಡ್ಡಾಯವಾಗಿ ಹನಿ ನೀರಾವರಿ ಅಳವಡಿಸಿರಬೇಕು, ಚಾಕಿ ತೋಟದ ಜಮೀನು ಸಮತಟ್ಟಾಗಿದ್ದು ಫಲವತ್ತಾಗಿರಬೇಕು. ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸಬೇಕು. ಮರಳು ಮಿಶ್ರಿತ ಕೆಂಪು ಮಣ್ಣು ಇರಬೇಕು.

6. ವಾರ್ಷಿಕ 1.50 ರಿಂದ 1.60 ಲಕ್ಷ ದ್ವಿತಳಿ ಮೊಟ್ಟೆ ಚಾಕಿ ಕಟ್ಟುವ ಸಾಮರ್ಥ್ಯತೆಯಿರಬೇಕು. ಪ್ರತಿ ತಂಡಕ್ಕೆ 5ಸಾವಿರ ಮೊಟ್ಟೆಗಳಂತೆ ವರ್ಷಕ್ಕೆ 32 ತಂಡಗಳಲ್ಲಿ, ಪ್ರತಿ ತಂಡದಿಂದ ತಂಡಕ್ಕೆ 10 ದಿನಗಳ ಅವಧಿಯಂತೆ ಚಾಕಿ ಮಾಡುವ ಬಗ್ಗೆ ಸಾಮರ್ಥ್ಯ ಇರಬೇಕು.

7. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆಗೆ ಆರ್ಥಿಕ ನೆರವನ್ನು ಬ್ಯಾಂಕುಗಳಿಂದ ಪಡೆಯಬಹುದು.

8. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಿದ ನಂತರ ತಾಂತ್ರಿಕತೆ ಉನ್ನತೀಕರಣಕ್ಕಾಗಿ 2 ವರ್ಷಕ್ಕೊಮ್ಮೆಯಾದರೂ ಒಂದು ವಾರದ ಅವಧಿಯ ಪುನಃಶ್ಚೇತನ ತರಬೇತಿ ಪಡೆಯಬೇಕು. ಪುನಶ್ಚೇತನ ತರಬೇತಿ ಪಡೆಯದಿದ್ದಲ್ಲಿ, ನೊಂದಣಿಯನ್ನು ನವೀಕರಿಸಲಾಗುವುದಿಲ್ಲ.

9. ರೂ.50/–ರ ಛಾಪಾ ಕಾಗದದ ಮೇಲೆ 10 ವರ್ಷಗಳವರೆಗೆ ಚಾಕಿ ತೋಟ, ಚಾಕಿ ಸಾಕಾಣಿಕೆ ಕಟ್ಟಡ ಹಾಗೂ ಚಾಕಿ ಸಾಕಾಣಿಕಾ ಸಲಕರಣೆಗಳನ್ನು ಉದ್ದೇಶಿತ ದ್ವಿತಳಿ ಚಾಕಿ ಹುಳು ಸಾಕಾಣಿಕೆ ಮಾಡಲು ಮಾತ್ರ ಉಪಯೋಗಿಸುವ ಬಗ್ಗೆ ಮುಚ್ಚಳಿಕೆ ಬರೆದುಕೊಡಬೇಕು.

10. ಚಾಕಿ ಸಾಕಾಣಿಕೆ ಕೇಂದ್ರದಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಕಾಯಿದೆ ಅನ್ವಯ ಕನಿಷ್ಠ **10** ವರ್ಷಗಳವರೆಗೆ ದಾಖಲೆ, ದಸ್ತಾವೇಜು ನಿರ್ವಹಿಸತಕ್ಕದ್ದು ಹಾಗೂ ಪರಿವೀಕ್ಷಣೆಗೆ ಅವಶ್ಯವಿದ್ದಲ್ಲಿ ಸದರಿ ದಾಖಲೆಗಳನ್ನು ಒದಗಿಸತಕ್ಕದ್ದು.

11. ಚಾಕಿ ಸಾಕಾಣಿಕಾ ಕೇಂದ್ರದಲ್ಲಿ ಪ್ರತಿವಾರ/ಪ್ರತಿ ಮಾಹೆಯಲ್ಲಿ ಚಾಕಿ ಮಾಡಿ ವಿತರಿಸುವ ವಿವರಗಳನ್ನು ನಿಗದಿತ ನಮೂನೆಗಳಲ್ಲಿ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸಬೇಕು. ವರದಿ ಸಲ್ಲಿಸಲು ವಿಫಲವಾದಲ್ಲಿ 'ದ್ವಿತಳಿ ಚಾಕಿ ವೆಚ್ಚದ' ಸಹಾಯಧನವನ್ನು ನೀಡಲಾಗುವುದಿಲ್ಲ.

12. ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ ಚಾಕಿ ತೋಟದಲ್ಲಿ ಶಿಫಾರಸ್ಸು ಮಾಡಿದ ತಳಿ, ಸ್ಥಳಾವಕಾಶ ಹಾಗೂ ಅಂತರ ಬೇಸಾಯಗಳನ್ನು ನಿರ್ವಹಿಸತಕ್ಕದ್ದು.

13. ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರದಲ್ಲಿ, ಚಾಕಿ ತೋಟ ಸ್ಥಾಪನೆ, ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು, ನಿಗದಿತ ಪ್ರಮಾಣದಲ್ಲಿ ಸಲಕರಣೆಗಳ ಖರೀದಿ ಮಾಡಿ, ಕನಿಷ್ಠ 3 ತಿಂಗಳ ಅವಧಿಯಲ್ಲಿ ದ್ವಿತಳಿ ಚಾಕಿ ಹುಳು ವಿತರಣೆ ಮಾಡಿದ್ದಲ್ಲಿ ಮಾತ್ರ ಸಹಾಯಧನ ಮಂಜೂರಾತಿಗಾಗಿ ಪರಿಗಣಿಸಲಾಗುವುದು. ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು. ಸಲಕರಣೆಗಳು ನಿಗದಿತ ಪ್ರಮಾಣದಲ್ಲಿ ಖರೀದಿಸಿರಬೇಕು, ಕಡಿಮೆ ಇದ್ದಲ್ಲಿ ಸಹಾಯಧನ ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ.

14. ಸಹಾಯಧನ ಪಡೆಯುವ ಫಲಾನುಭವಿಯೊಂದಿಗೆ ಇಲಾಖಾ ಸಿಬ್ಬಂದಿ / ಅಧಿಕಾರಿಗಳು ಚಾಕಿ ತೋಟ/ ಚಾಕಿ ಹುಳು ಸಾಕಾಣಿಕೆ ಕಟ್ಟಡ / ಸಲಕರಣೆ ಮುಂದೆ ನಿಂತಿರುವ ಛಾಯಾಚಿತ್ರ ತೆಗೆದು ಸಲ್ಲಿಸಬೇಕು.

15. ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ಸಹಾಯಧನವನ್ನು ಅವರ ಬ್ಯಾಂಕ್ ಖಾತೆಗೆ K2 ಮುಖಾಂತರ ವಿತರಿಸುವುದು. ಬ್ಯಾಂಕ್/ಸಂಘ ಸಂಸ್ಥೆಗಳಿಂದ ಸಾಲ ಪಡೆದಿದ್ದಲ್ಲಿ ಸಹಾಯಧನವನ್ನು ಬ್ಯಾಂಕಿಗೆ ಜಮಾ ಮಾಡುವುದು.

16. ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿ, ಮಹಜರ್, ಶಿಫಾರಸ್ಸು/ದೃಢೀಕರಣ ಗಳಿರಬೇಕು.

17. ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ಇಲಾಖೆಯಿಂದ ಸಹಾಯಧನ ಪಡೆದಿರುವ ಬಗ್ಗೆ ಚಾಕಿ ತೋಟಕ್ಕೆ ಫಲಕದಲ್ಲಿ/ಚಾಕಿ ಸಾಕಾಣಿಕೆ ಕೇಂದ್ರದ ಕಟ್ಟಡದ ಮೇಲೆ ವಿವರಗಳನ್ನು ಬರೆಯಿಸಬೇಕು/ಚಾಕಿ ಸಾಕಾಣಿಕೆ ಸಲಕರಣೆಗಳ ಮೇಲೆ engrave ಮಾಡಿಸುವುದು.

ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಸಹಾಯಧನ ನೀಡಲು ಐಟಂವಾರು ಪರಿಗಣಿಸಬೇಕಾದ ವಿವರಗಳನ್ನು ಕೆಳಗೆ ನಮೂದಿಸಿದೆ.

| ಕ್ರ.ಸಂ | ಐಟಂ / ವಿವರಗಳು | ಸಹಾಯಧನಕ್ಕೆ ಪರಿಗಣಿಸಬೇಕಾದ ಕನಿಷ್ಠ ಪ್ರಮಾಣ |
|---|---|---|
| 1 | ಹಿಪ್ಪುನೇರಳೆ ತೋಟ ಸ್ಥಾಪನೆ ಮತ್ತು ನಿರ್ವಹಣೆ(ಶಿಫಾರಸ್ಸು ಮಾಡಿರುವ ಹಿಪ್ಪುನೇರಳೆ ತಳಿಯ ಬಿತ್ತನೆ ಕಡ್ಡಿಗಳು/ನರ್ಸರಿ ಸಸಿಗಳು ಕೊಟ್ಟಿಗೆ ಗೊಬ್ಬರ, ರಸಾಯನಿಕ ಗೊಬ್ಬರ, ಜೈವಿಕ ಗೊಬ್ಬರ ವೆಚ್ಚ ಸೇರಿದೆ) | 2.00 ಎಕರೆ |
| 2 | ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆ (Micro Irrigation) | 2.00 ಎಕರೆ |
| 3 | ಚಾಕಿ ಸಾಕಾಣಿಕಾ ಕಟ್ಟಡ 5000 ರೋಗ ರಹಿತ ಮೊಟ್ಟೆಗಳ ಚಾಕಿ ಕಟ್ಟುವುದಕ್ಕೆ (42'*30'*16' ಎತ್ತರ) | 1.00 ಕಟ್ಟಡ |
| 4 | ಚಾಕಿ ಸಾಕಾಣಿಕಾ ಸಲಕರಣೆಗಳು | ಪ್ರಮಾಣ |
| 5 | ಪ್ಲಾಸ್ಟಿಕ್ ರೇರಿಂಗ್ ತಟ್ಟೆಗಳು | 400 |
| 6 | ರೇರಿಂಗ್ ಸ್ಟಾಂಡ್ ವಿತ್ ಜಿಐ ಪೈಪ್ಸ್/ಐರನ್ ಆಂಗಲ್ | 4 |
| 7 | ಇನ್‌ಕ್ಯೂಬೇಷನ್ ಫ್ರೇಮ್ಸ್ | 100 |
| 8 | ಲೀಫ್ ಚಾಪಿಂಗ್ ಮೆಷೀನ್ | 1 |
| 9 | ಹ್ಯುಮಿಡಿಫೈಯರ್(ಹೆವಿಡ್ಯೂಟಿ) | 1 |
| 10 | ಹೀಟರ್ | 2 |
| 11 | ಪವರ್ ಸ್ಪ್ರೇಯರ್ | 1 |
| 12 | ಸೋಂಕುನಿವಾರಕ ಮಾಸ್ಕ್ | 1 |
| 13 | ಮೈಕ್ರೋಸ್ಕೋಪ್ | 1 |
| 14 | ವೆಟ್ ಅಂಡ್ ಡ್ರೈ ಬಲ್ಬ್ ಥರ್ಮಾಮೀಟರ | 1 |
| 15 | ಬೆಡ್ ಕ್ಲೀನಿಂಗ್ ನೆಟ್ಸ್ | 1200 |
| 16 | ಪ್ಲಾಸ್ಟಿಕ್ ಟ್ರೇ ವಾಷಿಂಗ್ ಮೆಷಿನ್ | 1 |
| 17 | ಚಾಕಿ ಡಸ್ಟಿಂಗ್ ಮೆಷಿನ್ | 1 |
| 18 | 1 ಕೆವಿಎ ಜನರೇಟರ್ | 1 |
| 19 | ಇನ್‌ಕ್ಯೂಬೇಷನ್ ಚೇಂಬರ್ | 1 |

**ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಸಹಾಯಧನ ಮಂಜೂರು. ಮಾಡಲಾಗುವುದು**

1. ಮೇಲೆ ತಿಳಿಸಲಾದ ಐಟಂಗಳಿಗೆ ತೆರಿಗೆ ಮತ್ತು ಸಾಗಾಣಿಕಾ ವೆಚ್ಚ ಹೊರತು ಪಡಿಸಿ ಉಳಿದ ಮೊತ್ತಕ್ಕೆ ಸಹಾಯಧನ ನೀಡಲಾಗುವುದು.
2. ದಿನಾಂಕ:10.10.2018ರ ನಂತರದ ಪ್ರಸ್ತಾವನೆಗಳಿಗೆ ಪ್ರಸ್ತುತ ನಿಗದಿಪಡಿಸಿರುವ ಘಟಕದರ ಅನ್ವಯಿಸುವುದು. ಹಿಂದಿನ ಸಾಲುಗಳಲ್ಲಿ ಸಹಾಯಧನ ಪಡೆದಿರುವ ಚಾಕಿ ಸಾಕಾಣಿಕಾ ಕೇಂದ್ರಗಳಿಗೆ ಈ ಯೋಜನೆಯಲ್ಲಿ ಸಹಾಯಧನ ನೀಡಲು ಅವಕಾಶವಿರುವುದಿಲ್ಲ.
3. ಚಾಕಿ ತೋಟ ಸ್ಥಾಪನೆ/ನಿರ್ವಹಣೆ, ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕಾ ಸಲಕರಣೆ ಖರೀದಿ ಸೇರಿದಂತೆ ಮೇಲೆ ನಮೂದಿಸಿರುವ ಎಲ್ಲಾ ಐಟಂಗಳನ್ನು ಹೊಂದಿರುವ ಮೂರು ಘಟಕಗಳಿಗೆ ಸಹಾಯಧನ ಮಂಜೂರಾತಿಗಾಗಿ ಒಟ್ಟಾಗಿ ಪ್ರಸ್ತಾವನೆ

ಸಲ್ಲಿಸಿದಲ್ಲಿ ಮಾತ್ರ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು ಹಾಗೂ ಮೂರು ಘಟಕಗಳಿಗೆ ಪ್ರತ್ಯೇಕವಾಗಿ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ.

4. ಸಹಾಯಧನ ಪಡೆದ ನಂತರ ನಿಗದಿ ಮಾಡಲಾದ ಪ್ರಮಾಣದಲ್ಲಿಯೇ ಚಾಕಿ ಕಟ್ಟಬೇಕು.

**ರೇಷ್ಮೆ ಇಲಾಖೆಯ ಅಧಿಕಾರಿಗಳು ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಸಹಾಯಧನ ನೀಡಲು ಪಾಲಿಸಬೇಕಾದ ಅಂಶಗಳು:**

<u>ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು</u>

- ಈಗಾಗಲೇ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಜೇಷ್ಠತೆ ಆಧಾರದಲ್ಲಿ ಸಹಾಯಧನ ನೀಡಲು ಅರ್ಜಿಗಳನ್ನು ಪರಿಗಣಿಸುವುದು.
- ಹೊಸದಾಗಿ ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆಗೆ ಫಲಾನುಭವಿಗಳು ಅರ್ಜಿ ನೀಡಿದಲ್ಲಿ ದಾಖಲಾತಿ ವಹಿಯಲ್ಲಿ ಅರ್ಜಿಗಳನ್ನು ಕ್ರಮ ಸಂಖ್ಯೆವಾರು ನೊಂದಾಯಿಸಿಕೊಳ್ಳುವುದು.
- ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ನೀಡಿರುವ ಅರ್ಜಿಯನ್ನು ಪರಿಶೀಲಿಸಿ, ಅರ್ಹವಿದ್ದಲ್ಲಿ, ಅರ್ಜಿಯೊಂದಿಗಿನ ಅಡಕಗಳನ್ನು ದೃಢೀಕರಿಸಬೇಕು.
- ನಮೂನೆಯಲ್ಲಿ ಸ್ಥಳದ ಮಹಜರ್ ಜರುಗಿಸಿ; ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆಯಲ್ಲಿ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವುದು.

<u>ಸಂಬಂಧಪಟ್ಟ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು</u>

- ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ ಸ್ಥಾಪನೆಗೆ ನೀಡಿರುವ ಅರ್ಜಿಯನ್ನು ಪರಿಶೀಲಿಸುವುದು.
- ನಮೂನೆಯಲ್ಲಿ ತಮ್ಮ ಶಿಫಾರಸ್ಸನ್ನು ಭರ್ತಿ ಮಾಡಬೇಕು.
- ನಮೂನೆ ರೀತ್ಯಾ ಚೆಕ್ ಲಿಸ್ಟ್ ಮಾಹಿತಿ ಪರೀಕ್ಷಿಸಿ, ತುಂಬಿಸಬೇಕು.
- ದೃಢೀಕರಿಸಬೇಕಾದ ಎಲ್ಲಾ ಅಂಶಗಳಿಗೂ ತಮ್ಮ ಹೆಸರು, ಪದನಾಮ ಮತ್ತು ಕಛೇರಿಯ ಮೊಹರು ಹಾಕಿ ಸಹಿಮಾಡಿ ರೇಷ್ಮೆ ಉಪನಿರ್ದೇಶಕರಿಗೆ ಮಂಜೂರಾತಿಗಾಗಿ ಸಲ್ಲಿಸುವುದು.

<u>ಸಂಬಂಧಪಟ್ಟ ರೇಷ್ಮೆ ಉಪನಿರ್ದೇಶಕರು</u>

- ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ, ಇವರುಗಳೊಂದಿಗೆ ಛಾಯಾಚಿತ್ರ ತೆಗೆಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ. ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಚಾಕಿ ಸಾಕಾಣಿಕೆ ಕೇಂದ್ರದಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ಸಹಾಯಧನ ಮಂಜೂರಾತಿಗೆ ಸಂಬಂಧಿಸಿದ ಜಂಟಿ ನಿರ್ದೇಶಕರಿಗೆ ಸಲ್ಲಿಸುವುದು.

<u>ಸಂಬಂಧಪಟ್ಟ ರೇಷ್ಮೆ ಜಂಟಿ ನಿರ್ದೇಶಕರು</u>

- ಚಾಕಿ ಸಾಕಾಣಿಕೆ ಕೇಂದ್ರದಕ್ಕೆ ಭೇಟಿ ನೀಡಿ ಪರಿಶೀಲಿಸುವುದು.
- ಫಲಾನುಭವಿ, ಸ್ಥಳೀಯ ಸಿಬ್ಬಂದಿ/ಅಧಿಕಾರಿಗಳೊಂದಿಗೆ ಛಾಯಾಚಿತ್ರ ತೆಗೆಯಿಸಿಕೊಳ್ಳುವುದು.
- ಚೆಕ್ ಲಿಸ್ಟ್ ಪರಿಶೀಲಿಸಿ. ಎಲ್ಲಾ ಅಂಶಗಳ ಬಗ್ಗೆ ದೃಢೀಕರಿಸಿ ಚಾಕಿ ಸಾಕಾಣಿಕೆ ಕೇಂದ್ರದಕ್ಕೆ ಭೇಟಿ ನೀಡಿ ಪರಿಶೀಲಿಸುವುದು. ರೇಷ್ಮೆ ನಿರ್ದೇಶನಾಲಯಕ್ಕೆ ಮೂರು ಘಟಕಗಳ ಮಂಜೂರಾತಿಗಾಗಿ ಒಟ್ಟಾರೆ ಪ್ರಸ್ತಾವನೆಯನ್ನು ಸಲ್ಲಿಸುವುದು.

## ನೊಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ –ಚಾಕಿ ತೋಟ ಸ್ಥಾಪನೆ/ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನಕ್ಕೆ ಸಲ್ಲಿಸುವ ಅರ್ಜಿ

ಅರ್ಜಿದಾರರ ಭಾವ ಚಿತ್ರ

| | | |
|---|---|---|
| 1 | ಅರ್ಜಿದಾರರ ಹೆಸರು | |
| 2 | ತಂದೆ / ಗಂಡನ ಹೆಸರು | |
| 3 | ಪೂರ್ಣ ಅಂಚೆ ವಿಳಾಸ | |
| 4 | ಸಂವಹನ ಮಾಹಿತಿ | 1. ದೂರವಾಣಿ ಸಂಖ್ಯೆ:______ 4. ಸಿ.ಆರ್.ಸಿ. ನೋಂದಣಿ ಸಂ.______<br>2. ಮೊಬೈಲ್ ಸಂ.______ 5. ರೇಷ್ಮೆ ಕಾರ್ಡ್ ಸಂ.______<br>3. ಇ ಮೇಲ್ ಐಡಿ:(ಇದ್ದಲ್ಲಿ)______ 6. ಆಧಾರ್ ಸಂ.______ |
| 5 | ಯಾವ ಪ್ರವರ್ಗ? | ಪ.ಜಾ / ಪ.ಪಂ<br>ಪ.ಜಾ/ಪ.ಪಂ (ಉಪಜಾತಿ ಸಹಿತ) ಆಗಿದ್ದಲ್ಲಿ ಪ್ರಮಾಣ ಪತ್ರದ ಪ್ರತಿ ಹಾಗೂ ಸಂಖ್ಯೆ<br>:______ |
| 6 | ಚಾಕಿ ಸಾಕಾಣಿಕಾ ಹಿಪ್ಪುನೇರಳೆ ತೋಟದ ವಿವರ | ವಿಸ್ತೀರ್ಣ:______ ಎಕರೆ. ನಾಟಿ ಅಂತರ: , ತಳಿ<br>ನಾಟಿ ದಿನಾಂಕ ___/___/____ ಅಥವಾ ______ ತಿಂಗಳು ______ ವರ್ಷ<br>ಗಿಡಗಳ ಸಂಖ್ಯೆ______ |
| 7 | ಹಿಪ್ಪುನೇರಳೆ ತೋಟ/ಚಾಕಿ ಸಾಕಾಣಿಕ ಕಟ್ಟಡದ ಜಮೀನು/ನಿವೇಶನದ ವಿವರ | **ಜಮೀನು**<br>ಜಿಲ್ಲೆ –<br>ತಾಲ್ಲೂಕು –<br>ಹೋಬಳಿ –<br>ಗ್ರಾಮ –<br>ಸರ್ವೆ ನಂಬರ್(ಗಳು) –<br>ವಿಸ್ತೀರ್ಣ(ಒಟ್ಟು) –<br><br>**ನಿವೇಶನ**<br>ಜಿಲ್ಲೆ –<br>ತಾಲ್ಲೂಕು –<br>ಹೋಬಳಿ –<br>ಗ್ರಾಮ –<br>ಖಾತಾ ನಂಬರ್(ಗಳು) –<br>ವಿಸ್ತೀರ್ಣ(ಒಟ್ಟು) – |
| 8 | ನೀರಿನ ಮೂಲಗಳು ಮತ್ತು ಲಭ್ಯತೆ | |
| 9 | ಹಿಪ್ಪುನೇರಳೆ ತೋಟ/ಚಾಕಿ ಸಾಕಾಣಿಕ ಕಟ್ಟಡದ ಚೆಕ್‌ಬಂದಿ | ಪೂರ್ವಕ್ಕೆ –<br>ಪಶ್ಚಿಮಕ್ಕೆ –<br>ಉತ್ತರಕ್ಕೆ –<br>ದಕ್ಷಿಣಕ್ಕೆ – |
| 10 | ಬಂಡವಾಳದ ಮೂಲ | ಸ್ವಂತದ್ದು / ಸಾಲ |

| | | |
|---|---|---|
| 11 | ಸಾಲವಾಗಿದ್ದಲ್ಲಿ | ಬ್ಯಾಂಕ್ –<br>ಶಾಖೆ –<br>ಮಂಜೂರಾತಿ ನಂ.<br>ಮಂಜೂರಾತಿ ದಿನಾಂಕ –<br>ಮಂಜೂರಾದ ಮೊತ್ತ –<br>ಪಡೆದುಕೊಂಡ ಮೊತ್ತ –<br>ಉಳಿತಾಯ ಖಾತೆ ನಂ. – |
| 12 | ಫಲಾನುಭವಿಯ ಬ್ಯಾಂಕ್ ಹೆಸರು ಮತ್ತು ಶಾಖೆ ಐ.ಎಫ್.ಎಸ್.ಸಿ. ಸಂಖ್ಯೆ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ | |
| 13 | ರೇಷ್ಮೆ ಉದ್ಯಮ ______ ಯಲ್ಲಿನ ಅನುಭವ | ಹೊಸಬರು / ______ ವರ್ಷಗಳು |

ಮೇಲ್ಕಂಡ ವಿವರಗಳು ಸತ್ಯವಾಗಿರುತ್ತವೆ ಎಂದು ನಾನು ಪ್ರಮಾಣೀಕರಿಸಿ ಸಹಿ ಮಾಡಿರುತ್ತೇನೆ. ದ್ವಿತಳಿ ಚಾಕಿ ತೋಟ/ಚಾಕಿ ಸಾಕಾಣಿಕೆ ಕಟ್ಟಡ/ಖರೀದಿಸಿರುವ ಸಲಕರಣೆಗಳನ್ನು ದ್ವಿತಳಿ ಚಾಕಿ ಸಾಕಾಣಿಕೆ ಮಾಡಲು ಮಾತ್ರ ಉಪಯೋಗಿಸಿಕೊಳ್ಳುತ್ತೇನೆ. ಅರ್ಹವಿರುವ ಸಹಾಯಧನವನ್ನು ನೀಡಬೇಕೆಂದು ಕೋರುತ್ತೇನೆ.

ಸ್ಥಳ:

ದಿನಾಂಕ:

ಅರ್ಜಿದಾರರ ಸಹಿ / ಹೆಬ್ಬೆಟ್ಟಿನ ಗುರುತು

ಅರ್ಜಿಯ ಮಾಹಿತಿಗಳನ್ನು ಪರಿಶೀಲಿಸಿ – ಸರಿಯಾಗಿದೆ ಎಂದು ಹಾಗೂ ಲಗತ್ತುಗಳನ್ನು ಪರಿಶೀಲಿಸಿ ದೃಢೀಕರಿಸಿದೆ. ಸಹಾಯಧನ ನೀಡಿಕೆಗೆ ಪರಿಗಣಿಸಲು ನಿವೇದಿಸಿದೆ.

ರೇಷ್ಮೆ ಪ್ರದರ್ಶಕರು / ವಲಯಾಧಿಕಾರಿ
(ಸಹಿ ಮತ್ತು ವಿಳಾಸ / ಸೀಲು)

ರೇಷ್ಮೆ ಕೃಷಿ ವಿಸ್ತರಣಾಧಿಕಾರಿಗಳು
ತಾಂತ್ರಿಕ ಸೇವಾ ಕೇಂದ್ರ
(ಕಚೇರಿ ಮತ್ತು ಮೊಹರು)

| ಅರ್ಜಿದಾರರ ಭಾವ ಚಿತ್ರ |
|---|

ನೊಂದಾಯಿತ ಖಾಸಗಿ ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರದ –ಚಾಕಿ ತೋಟ ಸ್ಥಾಪನೆ/ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನ ನೀಡಿಕೆಗೆ

## ಚೆಕ್ ಲಿಸ್ಟ್

| | | |
|---|---|---|
| 1 | ಚಾಕಿ ಸಾಕಾಣಿಕಾದಾರರ ಹೆಸರು ಮತ್ತು ವಿಳಾಸ: | |
| 2 | ಹಿಪ್ಪುನೇರಳೆ ತೋಟದ ವಿವರ | ಗ್ರಾಮ –<br>ಸರ್ವೆ ನಂ. – |

ಈ ದಾಖಲಾತಿಗಳು ಲಗತ್ತಿಸಲಾಗಿವೆಯೇ ? ಇಲ್ಲವೇ ? ಪರೀಕ್ಷಿಸಿ – ದಾಖಲಿಸಿ

| | | |
|---|---|---|
| 1 | ನಿಗದಿತ ನಮೂನೆಯಲ್ಲಿ ಅರ್ಜಿ | |
| 2 | ಪಜಾ / ಪಪಂ ಯಾವ ಗುಂಪು ? | |
| 3 | ಚಾಕಿ ತೋಟದ ಸರ್ವೆ ನಂಬರು(ಗಳು)ಳ್ಳ ಚಾಲ್ತಿ ಪಹಣಿ | |
| 4 | ಚಾಕಿ ಸಾಕಾಣಿಕ ಕಟ್ಟಡ ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪತ್ರದ ಮೂಲ ಪ್ರತಿ | |
| 5 | ಚಾಕಿ ಸಾಕಾಣಿಕ ಕಟ್ಟಡ ಮಂಜೂರಾದ ನಕ್ಷೆಯ ಮೂಲ ಪ್ರತಿ | |
| 6 | ಚಾಕಿ ಸಾಕಾಣಿಕ ಕಟ್ಟಡ ಎಸ್ಟಿಮೇಟ್ (ವೆಚ್ಚದ ಅಂದಾಜು ಪಟ್ಟಿ) | |
| 7 | ಸಲಕರಣೆ ಖರೀದಿಸಿರುವ ಬಗ್ಗೆ ದೃಢೀಕರಣ | |
| 8 | ಚಾಕಿ ಸಾಕಾಣಿಕಾ ತೋಟ/ಕಟ್ಟಡ/ ಸಲಕರಣೆ ಖರೀದಿಗೆ ಸಾಲ ಪಡೆದಿದ್ದಲ್ಲಿ ಹಣಕಾಸು ಸಂಸ್ಥೆಯ ಸಾಲ ಮಂಜೂರಾತಿ ಪತ್ರದ ದೃಢೀಕೃತ ಪ್ರತಿ (ಅನ್ವಯವಾದಲ್ಲಿ) | |
| 9 | ಸಿಆರ್‌ಸಿ ನೋಂದಾಯಿತ ವಿವರ ಲಗತ್ತಿಸಿದೆಯೇ | |
| 10 | 50 ರೂಪಾಯಿಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ | |
| 11 | ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ನಡೆಸಿದ ಮಹಜರು / ರೇಷ್ಮೆ ಸಹಾಯಕ ನಿರ್ದೇಶಕರ/ರೇಷ್ಮೆ ಉಪನಿರ್ದೇಶಕರು/ರೇಷ್ಮೆ ಜಂಟಿ ನಿರ್ದೇಶಕರ ಪರಿಶೀಲನೆ ಮತ್ತು ಶಿಫಾರಸ್ಸು | |
| 12 | ಚೆಕ್ ಲಿಸ್ಟ್ ಮಾಹಿತಿ ಪರಿಪೂರ್ಣತೆ | |

ದೃಢೀಕರಿಸಿದೆ

ರೇಷ್ಮೆ ಪ್ರದರ್ಶಕರು /ವಲಯಾಧಿಕಾರಿ

______________ ವಲಯ

ದೃಢೀಕರಿಸಿದೆ

ರೇಷ್ಮೆ ಕೃಷಿ ವಿಸ್ತರಣಾಧಿಕಾರಿಗಳು

ತಾಂ.ಸೇ.ಕೇಂ.______________

---

ದೃಢೀಕರಿಸಿದೆ

ರೇಷ್ಮೆ ಕೃಷಿ ಸಹಾಯಕ ನಿರ್ದೇಶಕರು

______________

ವಿಭಾಗ

ದೃಢೀಕರಿಸಿದೆ

ರೇಷ್ಮೆ ಉಪ ನಿರ್ದೇಶಕರು

ಜಿ.ಪಂ.

______________

ಜಿಲ್ಲೆ

ದೃಢೀಕರಿಸಿದೆ

ರೇಷ್ಮೆ ಜಂಟಿ ನಿರ್ದೇಶಕರು

______________

ವಿಭಾಗ

## ಮಹಜರ್

ದಿನಾಂಕ__________ರಂದು________ಸಮಯದಲ್ಲಿ__________ಜಿಲ್ಲೆಯ____________ ತಾಂತ್ರಿಕ ಸೇವಾ ಕೇಂದ್ರಕ್ಕೆ ಸೇರಿದ ಅಧಿಕಾರಿಗಳಾದ ಶ್ರೀ______________ರವರು ________ ಸಿಬ್ಬಂದಿಯೊಂದಿಗೆ__________ಗ್ರಾಮ/ಪಟ್ಟಣ/ನಗರಕ್ಕೆ ಭೇಟಿ ನೀಡಿ ಶ್ರೀ________________ ಬಿನ್______________ರವರು ಸ್ಥಾಪಿಸಿರುವ ದ್ವಿತಳಿ ಚಾಕಿ ಸಾಕಾಣಿಕಾ ತೋಟ/ಕಟ್ಟಡ/ ಸಲಕರಣೆ ಖರೀದಿ ಇದನ್ನು ಪರಿವೀಕ್ಷಿಸಿದಾಗ ಮಾಡಿದ ಮಹಜರ್. ಸದರಿ ಶ್ರೀ/ಶ್ರೀಮತಿ__________________ರವರು ಸ್ಥಳದಲ್ಲಿ ಹಾಜರಿದ್ದು ಮಹಜರು ಮಾಡಲು ಅವಕಾಶ ಮಾಡಿಕೊಟ್ಟಿರುತ್ತಾರೆ.

ಶ್ರೀ/ಶ್ರೀಮತಿ________________ರವರು ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರವನ್ನು ಸ್ವಂತ ಬಂಡವಾಳದಿಂದ ಮಾಡಿರುತ್ತಾರೆ/ಬ್ಯಾಂಕ್‌ನಿಂದ ಸಾಲ ಪಡೆದು ಮಾಡಿರುತ್ತಾರೆ. ಸ್ಥಾಪಿಸಿರುವ ಚಾಕಿ ಸಾಕಾಣಿಕಾ ಕೇಂದ್ರವನ್ನು 10 ವರ್ಷಗಳವರೆವಿಗೆ ಮುಂದುವರೆಸಿಕೊಂಡು ಹೋಗುತ್ತೇನೆಂದು ಮುಚ್ಚಳಿಕೆ ಬರೆದು ಕೊಟ್ಟಿರುತ್ತಾರೆ. ಇವರಿಗೆ '--------' ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಯಾವುದೇ ಆಕ್ಷೇಪಣೆಗಳಿಲ್ಲವೆಂದು ಹಾಜರಿದ್ದ ಪಂಚರು ಮಹಜರ್ ಮಾಡುವ ಸಮಯದಲ್ಲಿ ತಿಳಿಸಿರುತ್ತಾರೆ.

ಶ್ರೀ / ಶ್ರೀಮತಿ ________________ರವರಿಗೆ '---------- ಯೋಜನೆ' ಯಡಿಯಲ್ಲಿ ಸ್ಥಾಪಿಸಿರುವ ದ್ವಿತಳಿ ಚಾಕಿ ಸಾಕಾಣಿಕಾ ತೋಟ/ಕಟ್ಟಡ/ಸಲಕರಣೆಗಳನ್ನು ಪರಿಶೀಲಿಸಿ, ಪರಿವೀಕ್ಷಿಸಿ, ದೃಢೀಕರಿಸಿ ರೂ.__________ಗಳ(ರೂ.______________________) ಸಹಾಯಧನ ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತೇನೆ.

**ಖರೀದಿಸಿರುವ ಸಲಕರಣೆಗಳ ಪಟ್ಟಿ**

| ಉಪಕರಣಗಳ ವಿವರ | ಸಂಖ್ಯೆ | ದರ | ಮೌಲ್ಯ | ಖರೀದಿಸಿದ ಸಂಸ್ಥೆ | ಬಿಲ್ ಸಂಖ್ಯೆ | ದಿನಾಂಕ |
|---|---|---|---|---|---|---|
| | | | | | | |

ಈ ಪಟ್ಟಿಯ ರೀತ್ಯಾ ತೆರಿಗೆ ಪಾವತಿಸಿರುವ ಬಿಲ್(ಗಳ) ಮೂಲ ಪ್ರತಿ (ಗಳನ್ನು) ಪರಿಶೀಲಿಸಲಾಯಿತು.

ಸಾಕ್ಷಿಗಳು (ವಿಳಾಸದೊಂದಿಗೆ)

1.

2.

ನನ್ನ ಸಮಕ್ಷಮದಲ್ಲಿ
ರೇಷ್ಮೆ ಕೃಷಿ ವಿಸ್ತರಣಾಧಿಕಾರಿಗಳು
ತಾಂತ್ರಿಕ ಸೇವಾ ಕೇಂದ್ರ

---

ವಿವರಗಳನ್ನು ದಿನಾಂಕ ___/ ___/ ______ ರಂದು ಪರಿಶೀಲಿಸಿದೆ.

ಸ್ಥಾಪಿಸಿರುವ ದ್ವಿತಳಿ ಚಾಕಿ ಸಾಕಾಣಿಕಾ ತೋಟ/ಕಟ್ಟಡ/ ಸಲಕರಣೆಗಳನ್ನು ಪರಿಶೀಲಿಸಿ, ದೃಢೀಕರಿಸಿದೆ ;

ಸಹಾಯಧನ ಮಂಜೂರು ಮಾಡಬಹುದೆಂದು ಶಿಫಾರಸ್ಸು ಮಾಡಿದೆ.

| | | |
|---|---|---|
| ದೃಢೀಕರಿಸಿದೆ | ದೃಢೀಕರಿಸಿದೆ | ದೃಢೀಕರಿಸಿದೆ |
| ರೇಷ್ಮೆ ಕೃಷಿ ಸಹಾಯಕ ನಿರ್ದೇಶಕರು | ರೇಷ್ಮೆ ಉಪ ನಿರ್ದೇಶಕರು ಜಿ.ಪಂ. | ರೇಷ್ಮೆ ಜಂಟಿ ನಿರ್ದೇಶಕರು |
| ____________ ವಿಭಾಗ | ____________ ಜಿಲ್ಲೆ | ____________ ವಿಭಾಗ |

## ಮುಚ್ಚಳಿಕೆ ಪತ್ರ

________________ ಸಂಬಂದಿಸಿದಂತೆ
----------- ಯೋಜನೆಯಡಿ ಸಹಾಯಧನದ ಬಗ್ಗೆ

ಮುಚ್ಚಳಿಕೆ (ರೂ.50/-ಛಾಪಾ ಕಾಗದದ ಮೇಲೆ)__________ಜಿಲ್ಲೆಯ ________ ತಾಲ್ಲೂಕಿನ________ಹೋಬಳಿಯ_______ಗ್ರಾಮದ__________ರವರ ಮಗ/ಮಗಳು/ಹೆಂಡತಿಯಾದ ______________ಎಂಬ ಹೆಸರಿನ ನಾನು ಸ್ಥಾಪಿಸಿರುವ ದ್ವಿತಳಿ ಚಾಕಿ ಸಾಕಾಣಿಕಾ ತೋಟ/ಕಟ್ಟಡ/ ಸಲಕರಣೆ ಇದಕ್ಕಾಗಿ ಇಲಾಖೆಯಿಂದ________ ರೂ.ಗಳ ಸಹಾಯಧನವನ್ನು ಪಡೆದಿದ್ದೇನೆ. ನಾನು ಸ್ಥಾಪಿಸಿರುವ ದ್ವಿತಳಿ ಚಾಕಿ ಸಾಕಾಣಿಕಾ ತೋಟ/ಕಟ್ಟಡ/ಸಲಕರಣೆಗಳನ್ನು ರೇಷ್ಮೆ ಕೃಷಿಗಾಗಿ ಉಪಯೋಗಿಸುತ್ತೇನೆ **ಹಾಗೂ 10** ವರ್ಷಗಳವರೆವಿಗೆ ಇಲಾಖೆಯು ನಿಗದಿಪಡಿಸಿರುವ ನಿಬಂಧನೆಗಳಿಗೆ ಒಳಪಟ್ಟು ಮುಂದುವರೆಸಿಕೊಂಡು ಹೋಗುತ್ತೇನೆ.

ತಪ್ಪಿದಲ್ಲಿ ಅಥವಾ ಇದನ್ನು ದುರುಪಯೋಗ ಪಡಿಸಿಕೊಂಡಲ್ಲಿ ಸಹಾಯಧನ ಪಡೆದ ಹಣವನ್ನು ನನ್ನಿಂದ ಭೂ ಕಂದಾಯ ಬಾಕಿಯಂತೆ ವಸೂಲ ಮಾಡಲು ಒಪ್ಪಿ-ಮುಚ್ಚಳಿಕೆ ಬರೆದು ಕೊಟ್ಟಿರುತ್ತೇನೆ.

ಸ್ಥಳ:

ದಿನಾಂಕ:

ಫಲಾನುಭವಿಯ ಸಹಿ

ಮುಚ್ಚಳಿಕೆಯಲ್ಲಿನ ಹೇಳಿಕೆಯನ್ನು ದೃಢೀಕರಿಸಿದೆ.

ರೇಷ್ಮೆ ಪ್ರದರ್ಶಕರು
ವಲಯ

ರೇಷ್ಮೆ ವಿಸ್ತರಣಾಧಿಕಾರಿ
ತಾಂತ್ರಿಕ ಸೇವಾ ಕೇಂದ್ರ

## ನೊಂದಾಯಿತ ದ್ವಿತಳಿ ಚಾಕಿ ಸಾಕಾಣಿಕೆಗೆ – ಚಾಕಿ ತೋಟ ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನ


## ಉಪಯುಕ್ತತಾ ದೃಢೀಕರಣ ಪತ್ರ

______________ ಯೋಜನೆಯಡಿ ಸ್ಥಾಪಿಸಿರುವ ದ್ವಿತಳಿ ಚಾಕಿ ಸಾಕಾಣಿಕಾ ತೋಟ/ಕಟ್ಟಡ/ ಸಲಕರಣೆಗೆ ಸಹಾಯಧನ ನೀಡಲು ರೂ.__________ ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಬಿಡುಗಡೆ ಮಾಡಿರುವ ಹಣದ ಪೈಕಿ ರೂ.________ ಲಕ್ಷಗಳನ್ನು ______ ವಿತರಿಸಿದೆ ಹಾಗೂ ಬಿಡುಗಡೆಗೊಳಿಸಿರುವ ಹಣವನ್ನು ಸಂಪೂರ್ಣವಾಗಿ ಉಪಯೋಗಿಸಿದೆ ಎಂದು ದೃಢೀಕರಿಸಿದೆ.

ಸ್ಥಳ:
ದಿನಾಂಕ:

ರೇಷ್ಮೆ ಉಪ ನಿರ್ದೇಶಕರು
ಜಿ.ಪಂ.____________ಜಿಲ್ಲೆ

## Model Chawki Rearing Building
## For 5000 dfls/batch



# ವಿಧಾನ ಪರಿಷತ್ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ2166 ಕ್ಕೆ ಅನುಬಂಧ-1

| ಕ್ರ.ಸ | ಜಿಲ್ಲೆ | ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರದ ಹೆಸರು, ಮಾಲೀಕರ ಹೆಸರು ಮತ್ತು ವಿಳಾಸ | ಸಹಾಯಧನ ಸೌಲಭ್ಯ ಪಡೆದಿರುವ ವಿವರ | ಸಹಾಯಧನದ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ಶ್ರೀ ವಿನಾಯಕ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಬಾಲಚಂದ್ರ ಬಿನ್ ಮುನಿಕೃಷ್ಣಪ್ಪ, ಗಂಗಸಂದ್ರ, ದೊಡ್ಡಬಳ್ಳಾಪುರ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 250000-00 |
| 2 | ಬೆಂಗಳೂರು ಗ್ರಾಮಾಂತರ | ದೀಪಾ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ರಮೇಶ್ ಬಿನ್ ಪಿಳ್ಳಾರೆಡ್ಡಿ, ಮುತ್ಸಂದ್ರ, , ಹೊಸಕೋಟೆ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 388319-00 |
| 3 | ಬೆಂಗಳೂರು ಗ್ರಾಮಾಂತರ | ಶ್ರೀ ಆಂಜನೇಯ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಆನಂದ ಕುಮಾರ್ ಬಿನ್ ಲೇಟ್ ಕೆಂಪಣ್ಣ, ಅನುಪಹಳ್ಳಿ, ಹೊಸಕೋಟೆ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 395900-00 |
| 4 | ಬೆಂಗಳೂರು ನಗರ | ಸಾವಯವ ಕೃಷಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಶ್ರೀನಿವಾಸ ಬಿನ್ ಶ್ರೀನಿವಾಸರೆಡ್ಡಿ, ಬನಹಳ್ಳಿ, ಸರ್ಜಾಪುರ, ಆನೇಕಲ್ ತಾಲ್ಲೂಕು | ಹುಳು ಸಾಕಾಣಿಕಾ ಸಲಕರಣೆ | 62000-00 |
| 5 | ಚಿಕ್ಕಬಳ್ಳಾಪುರ | ಶ್ರೀ ಕೃಷ್ಣಾ ಬೈವೋಲ್ಟಿನ್ ಚಾಕಿ ರೇರಿಂಗ್ ಸೆಂಟರ್, ಶ್ರೀ ವಿ.ಎಸ್.ಕಿರಣ್ ಬಿನ್ ಶ್ರೀರಾಮಪ್ಪ, ವೆಂಕಟಾಪುರ ಗ್ರಾಮ, ಚಿಂತಾಮಣಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 340679-00 |
| 6 | ಚಿಕ್ಕಬಳ್ಳಾಪುರ | ಎನ್.ಆರ್. ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಎನ್.ರಮೇಶ್ ಬಿನ್ ಕೆ.ಎಸ್.ನಾರಾಯಣಸ್ವಾಮಿ, ಕಾಳನಾಯಕನಹಳ್ಳಿ, ಶಿಡ್ಲಘಟ್ಟ ತಾಲ್ಲೂಕು. | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 355992-00 |
| 7 | ಚಿಕ್ಕಬಳ್ಳಾಪುರ | ಕಲಾ ಖಾಸಗಿ ಚಾಕಾಣಿಕಾ ಕೇಂದ್ರ, ಶ್ರೀ ಕೆ.ಎ.ಅಶೋಕರೆಡ್ಡಿ ಬಿನ್ ಆದಿನಾರಾಯಣರೆಡ್ಡಿ, ನಲ್ಲಪ್ಪರೆಡ್ಡಿಪಲ್ಲಿ, ಬಾಗೇಪಲ್ಲಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 352990-00 |
| 8 | ಚಿಕ್ಕಬಳ್ಳಾಪುರ | ಸುಮಾ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀಮತಿ ಸುಮಾ ಕೋಂ ಚಂದ್ರಪ್ಪ, ಮಳಮಾಚನಹಳ್ಳಿ, ಶಿಡ್ಲಘಟ್ಟ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 420000-00 |
| 9 | ಚಿಕ್ಕಬಳ್ಳಾಪುರ | ಶ್ರೀ ಮಾರುತಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಬಿ.ಎಂ.ನಾರಾಯಣಸ್ವಾಮಿ ಬಿನ್ ಮುನಿಶಾಮಪ್ಪ, ಭಕ್ತರಹಳ್ಳಿ, ಶಿಡ್ಲಘಟ್ಟ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 538090-00 |
| 10 | ಚಿಕ್ಕಬಳ್ಳಾಪುರ | ಶ್ರೀ ಮಂಜುನಾಥ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಕೇಶವರೆಡ್ಡಿ ಬಿನ್ ಚಿಕ್ಕಗಂಗರೆಡ್ಡಿ, ಹನುಮೇನಹಳ್ಳಿ, ಗೌರಿಬಿದನೂರು ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 322750-00 |
| 11 | ಚಿತ್ರದುರ್ಗ | ಚಿನ್ಮಯಿ ಚಾಕಿ ಸಾಕಾಣಿಕೆ ಕೇಂದ್ರ, ಶ್ರೀ ಹೆಚ್.ಕೆ.ಬಸಯ್ಯ, ಕೋನಸಾಗರ, ಮೊಳಕಾಲ್ಮುರು ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಹನಿ ನೀರಾವರಿ, ಸಲಕರಣೆ | 202593-00 |
| 12 | ಚಿತ್ರದುರ್ಗ | ಶ್ರೀ ಗುರು ತಿಪ್ಪೇರುದ್ರಸ್ವಾಮಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಕೆ.ಜಿ.ತಿಪ್ಪೇಸ್ವಾಮಿ ಬಿನ್ ಗಿರಿಯಪ್ಪ, ಮಲ್ಲೂರಹಟ್ಟಿ, ಚಳ್ಳಕೆರೆ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ ಹಾಗೂ ನಿರ್ವಹಣೆ | 275084-00 |
| 13 | ಚಿತ್ರದುರ್ಗ | ಐಶ್ವರ್ಯ ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರ, ಶ್ರೀ ಕೆ.ಇ.ನಾಗರಾಜು ಬಿನ್ ಈರಣ್ಣ, ಚಿಕ್ಕಚೆಲ್ಲೂರು, ಚಳ್ಳಕೆರೆ ತಾಲ್ಲೂಕು | ಚಾಕಿ ಹುಳು ಸಾಕಾಣಿಕೆ ನಿರ್ಮಾಣ, ಹಿಪ್ಪುನೇರಳೆ ತೋಟ ಸ್ಥಾಪನೆ/ ನಿರ್ವಹಣೆ, ಸಲಕರಣೆ | 352990-00 |

| | | | | |
|---|---|---|---|---|
| 14 | ಚಿತ್ರದುರ್ಗ | ಶ್ರೀ ಮರುಳಸಿದ್ದೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಚನ್ನಬಸಪ್ಪ ಬಿನ್ ಎಸ್.ಶಿವಣ್ಣ, ಸಿದ್ದವ್ವನದುರ್ಗ, ಚಿತ್ರದುರ್ಗ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ/ನಿರ್ವಹಣೆ, ಸಲಕರಣೆ | 384941-00 |
| 15 | ಚಿತ್ರದುರ್ಗ | ಎಸ್.ಎಂ.ಎಸ್ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಲೋಕೇಶ್ ಬಿನ್ ಕಾಳೇಗೌಡ, ಕೋಡಿಹಳ್ಳಿ , ಹಿರಿಯೂರು ತಾಲ್ಲೂಕು. | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ/ನಿರ್ವಹಣೆ, ಹನಿ ನೀರಾವರಿ | 319492-00 |
| 16 | ಚಿತ್ರದುರ್ಗ | ಐಶ್ವರ್ಯ ಲಕ್ಷ್ಮೀ ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರ, ಶ್ರೀ ಎಸ್. ಬೊಮ್ಮನಗೌಡ ಬಿನ್ ಸಣ್ಣ ಈರಪ್ಪ, ಕಸ್ತೂರಿತಿಮ್ಮನಹಳ್ಳಿ, ಚಳ್ಳಕೆರೆ ತಾಲ್ಲೂಕು | ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ, ಹಿಪ್ಪುನೇರಳೆ ತೋಟ ಸ್ಥಾಪನೆ/ ನಿರ್ವಹಣೆ, ಸಲಕರಣೆ | 266583-00 |
| 17 | ಚಿತ್ರದುರ್ಗ | ಶ್ರೀ ಮಂಜುನಾಥ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಎಸ್.ರಾಮಕುಮಾರ್ ಬಿನ್ ಶ್ರೀಮೂರ್ತಿ, ದೊಡ್ಡಚೆಲ್ಲೂರು, ಚಳ್ಳಕೆರೆ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 879420-00 |
| 18 | ಕೋಲಾರ | ಶ್ರೀ ಭೈರವೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಮುನಿರತ್ನಯ್ಯ ಬಿನ್ ಮುನಿಯಪ್ಪ, ಲಕ್ಷ್ಮೀಸಾಗರ, ಶ್ರೀನಿವಾಸಪುರ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 264800-00 |
| 19 | ಕೋಲಾರ | ಶ್ರೀ ಮಾರುತಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಎಂ.ಎಸ್.ಗೋಪಾಲಕೃಷ್ಣ ಬಿನ್ ನಂಜುಂಡಪ್ಪ, ಮಾಸ್ತೇನಹಳ್ಳಿ, ಶ್ರೀನಿವಾಸಪುರ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 240300-00 |
| 20 | ಕೋಲಾರ | ಶ್ರೀ ವೆಂಕಟೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀಮತಿ ಕಮಲಮ್ಮ ಕೋಂ ವೆಂಕಟೇಶಪ್ಪ, ಅಹನ್ಯ, ಮಾಲೂರು ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 227700-00 |
| 21 | ಕೋಲಾರ | ಶ್ರೀ ಶ್ರೀನಿವಾಸ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಆಂಜಿನಪ್ಪ ಬಿನ್ ತಿಮ್ಮರಾಯಪ್ಪ, ರಾಮಪುರ, ಕೋಲಾರ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 377800-00 |
| 22 | ರಾಮನಗರ | ಶ್ರೀ ಕಲ್ಪಶ್ರೀ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ತಿಮ್ಮೇಗೌಡ ಬಿನ್ ವೆಂಕಟೇಗೌಡ, ಹೊಟ್ಟಿಗನಹೊಸಹಳ್ಳಿ, ಚನ್ನಪಟ್ಟಣ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ | 274807-00 |
| 23 | ರಾಮನಗರ | ಶ್ರೀ ಅಂಕನಾಥೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ , ನಾಗರಾಜು ಬಿನ್ ರಾಮೇಗೌಡ, ಹೊಸೂರುದೊಡ್ಡಿ, ಚನ್ನಪಟ್ಟಣ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ | 274709-00 |
| 24 | ರಾಮನಗರ | ಶ್ರೀ ಮಂಜುನಾಥ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ , ಶ್ರೀ ಗಣೇಶ್ ಬಿನ್ ಅಂದಾನಿಹೆಗ್ಗಡ ಯಲಚಿಪಾಳ್ಯ,ಚನ್ನಪಟ್ಟಣ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ | 274709-00 |
| 25 | ರಾಮನಗರ | ಶ್ರೀ ಲಕ್ಷ್ಮೀವೆಂಕಟೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಆರ್ ನಾಗೇಶ್, ಎಸ್.ಎಲ್.ವಿ ಹೊಂಗನೂರು, ಚನ್ನಪಟ್ಟಣ ತಾಲ್ಲೂಕು | ಸಲಕರಣೆ | 119774-00 |
| 26 | ರಾಮನಗರ | ಎಸ್.ಎಂ.ಎಸ್ ಚಾಕಿ ಖಾಸಗಿ ಸಾಕಾಣಿಕಾ ಕೇಂದ್ರ, ಶ್ರೀಮತಿ ಗಾಯಿತ್ರಿಗಣೇಶ ಶ್ರೀ.ಮಂಜುನಾಥಸ್ವಾಮಿ ಮಂಗಳವಾರಪೇಟೆ, ಚನ್ನಪಟ್ಟಣ ತಾಲ್ಲೂಕು | ಸಲಕರಣೆ | 299426-00 |
| 27 | ರಾಮನಗರ | ಹುಲಿಕೆರೆ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಹೆಚ್.ಸಿ.ರಾಜಣ್ಣ ಬಿನ್ ಚಿಕ್ಕಲಕ್ಷ್ಮಯ್ಯ, ಹುಲಿಕೆರೆ, ರಾಮನಗರ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ | 346753-00 |
| 28 | ರಾಮನಗರ | ಪ್ರಗತಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಬಿ.ಕುಮಾರಸ್ವಾಮಿ ಬಿನ್ ಬಸಪ್ಪ ವಿಭೂತಿಕೆರೆ, ರಾಮನಗರ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ | 327579-00 |

| | | | | |
|---|---|---|---|---|
| 29 | ರಾಮನಗರ | ಕಿರಣಗೆರೆ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಬಿ.ಎನ್.ರಾಮಕೃಷ್ಣಯ್ಯ ಬಿನ್ ನಂಜೇಗೌಡ , ಬೇವೂರು, ಚನ್ನಪಟ್ಟಣ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ | 857096-00 |
| 30 | ತುಮಕೂರು | ಪ್ರಕೃತಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀಮತಿ ಎ.ಚಂದ್ರಮ್ಮ ಕೋಂ ಕಮಲಾಭ ಜಿ.ಟಿ ಗೋಪಿಕುಂಟೆ, ಶಿರಾ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ | 275000-00 |
| 31 | ತುಮಕೂರು | ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ಚಾಕಿ ಸಾಕಾಣಿಕಾ ಕೇಂದ್ರ, ಲಿಂಗದಹಳ್ಳಿ, ಶ್ರೀ ರಾಮಾಂಜನರೆಡ್ಡಿ ಪಿ. ಬಿನ್ ಪಾವಣ್ಣ, ಲಿಂಗದಹಳ್ಳಿ, ಪಾವಗಡ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 275000-00 |
| 32 | ತುಮಕೂರು | ಶ್ರೀ ಮಾರುತಿ ಚಾಕಿ ಸಾಕಾಣಿಕಾ ಕೇಂದ್ರ, ಬಿ.ಹೊಸಹಳ್ಳಿ, ಶ್ರೀ ಅಂಜನರೆಡ್ಡಿ ಬಿನ್ ನಾರಾಯಣಪ್ಪ, ಬಿ.ಹೊಸಹಳ್ಳಿ, ಪಾವಗಡ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 412000-00 |
| 33 | ತುಮಕೂರು | ಹಾರಿಕ ಚಾಕಿ ಸಾಕಾಣಿಕಾ ಕೇಂದ್ರ, ಸಾಸಲಕುಂಟೆ, ಶ್ರೀ ವಿರೇಶ್ ಕುಮಾರ್ ಬಿನ್ ನರಸಪ್ಪ, ಸಾಸಲಕುಂಟೆ, ಪಾವಗಡ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 410000-00 |
| 34 | ಚಾಮರಾಜನಗರ | ಶ್ರೀ ಕಂಠೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ವೈ.ಎಸ್.ಅನಿಲ್ ಕುಮಾರ್ ಬಿನ್ ಕೆ.ಶೇಖರಮೂರ್ತಿ, ಯಡಿಯೂರು, ಚಾಮರಾಜನಗರ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹನಿ ನೀರಾವರಿ, ಹಿಪ್ಪುನೇರಳೆ ನಾಟಿ | 518053-00 |
| 35 | ಹಾಸನ | ಶ್ರೀ ಚಂದ್ರು ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಚಂದ್ರು ಬಿನ್ ಜವರೇಗೌಡ, ತೇಜೂರು, ಅರಕಲಗೂಡು ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 701152-00 |
| 36 | ಮಂಡ್ಯ | ಶ್ರೀ ಕಬ್ಬಾಳಮ್ಮ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಕೆ.ದಿನೇಶ ಬಿನ್ ಲೇಟ್ ಕೃಷ್ಣೇಗೌಡ, ವಳಗೆರದೊಡ್ಡಿ, ಮದ್ದೂರು ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ ಮತ್ತು ಸಲಕರಣೆ ಖರೀದಿಗೆ | 359733-00 |
| 37 | ಮಂಡ್ಯ | ಶ್ರೀ ಲಕ್ಷ್ಮಿವೆಂಕಟೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀಮತಿ ಹೇಮಲತಾ ಕೆ.ಆರ್. ಕೋಂ ಬಿ.ಟಿ.ಕೃಷ್ಣ, ಬೆಳತೂರು, ಮದ್ದೂರು ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ | 98000-00 |
| 38 | ಮಂಡ್ಯ | ಶ್ರೀ ಸ್ನೇಹ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಹೆಚ್.ಪಿ.ರಾಮಚಂದ್ರ ಬಿನ್ ಪುಟ್ಟೇಗೌಡ, ಹೆಮ್ಮಿಗೆ, ಮಂಡ್ಯ ತಾಲ್ಲೂಕು | ಸಲಕರಣೆ ಖರೀದಿ | 185000-00 |
| 39 | ಮಂಡ್ಯ | ಶ್ರೀ ದೊಡ್ಡತಾಯಮ್ಮ ಅಂಕನಾಥೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಟಿ.ಎಸ್.ನಾಗರಾಜು ಬಿನ್ ಸಿದ್ದಪ್ಪ,ತೈಲೂರು, , ಮದ್ದೂರು ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ | 325000-00 |
| 40 | ಮಂಡ್ಯ | ಶ್ರೀ ಲಕ್ಷ್ಮಿವೆಂಕಟೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀಮತಿ ರೇಣುಕಾ ಕೋಂ ಡಿ.ವೆಂಕಟೇಶ್, ಸಾಗ್ಯ ಸರಗೂರು ಗ್ರಾಮ, ಮಳವಳ್ಳಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 333863-00 |
| 41 | ಮಂಡ್ಯ | ಶ್ರೀ ಲಕ್ಷ್ಮಿದೇವಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀಮತಿ ಎಸ್.ಟಿ.ವಸಂತ ಕೋಂ ಬಿ.ಜಿ.ಧನಂಜಯ, ಬಡ್ಡೇನಹಳ್ಳಿ, , ಕೆ.ಆರ್.ಪೇಟೆ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 341380-00 |
| 42 | ಬಳ್ಳಾರಿ | ಶ್ರೀ ಬೆಟ್ಟದ ಮಲ್ಲೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಬಣಕಾರ ಮಲ್ಲಿಕಾರ್ಜುನ ಬಿನ್ ದೇವಪ್ಪ, ತಂಬ್ರಹಳ್ಳಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 900000-00 |

| | | | | |
|---|---|---|---|---|
| 43 | ಬೀದರ್ | ಶ್ರೀ ಮೈಲಾರ ಲಿಂಗ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಸುಧಾಕರ್ ಬಿನ್ ರಾಮಣ್ಣ ಹರನಾಳ, ಧುಮ್ಮನಸೂರು, ಹುಮನಾಬಾದ್ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 1080000-00 |
| 44 | ಕಲಬುರಗಿ | ಶ್ರೀ ಸಿದ್ಧಬಸವೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ನಿಂಬೆಣ್ಣಪ್ಪ ಬಿನ್ ಗುಂಡೇರಾಯ, ಕಡಣಿ ಗ್ರಾಮ, ನಂ.101, ಆನಂದೇಶ್ವರ ನಗರ, ಕಲಬುರಗಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 887332-00 |
| 45 | ಕಲಬುರಗಿ | ಶ್ರೀ ಸಮರ್ಥ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ರಾಜೇಂದ್ರ ಬಿನ್ ಹಣಮಂತರಾಯ, ಶರಣಶಿರಸಗಿ, ಕಲಬುರಗಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 900000-00 |
| 46 | ರಾಯಚೂರು | ಶ್ರೀ ಮಲ್ಲಿಕಾರ್ಜುನ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಮಲ್ಲೇಶಗೌಡ ಬಿನ್ ಅಮರೇಗೌಡ ಪಾಟೀಲ್, ಸಾಕೀನ್: ಮಟ್ಟೂರ, ಮಸ್ಕಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಸಲಕರಣೆ ಖರೀದಿ, ತೋಟ ನಿರ್ವಹಣೆ | 156000-00 |
| 47 | ಬಾಗಲಕೋಟೆ | ಶ್ರೀ ಪಾಂಡುರಂಗ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಉಮೇಶ ಬಿನ್ ನಾರಾಯಣ ಪವಾರ, ಗದ್ಯಾಳ, ಜಮಖಂಡಿ ತಾಲ್ಲೂಕು | ಹಿಪ್ಪುನೇರಳೆ ತೋಟ ಸ್ಥಾಪನೆ/ ಸಲಕರಣೆ ಖರೀದಿ | 133688-00 |
| 48 | ಬಾಗಲಕೋಟೆ | ಶ್ರೀ ಬಸವೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ,, ಶ್ರೀ ಬಸಗೊಂಡ ಭೀಮರಾವ್.ಸೂರ್ಯವಂಶಿ/ಚಾಂಬಾರ, ಗದ್ಯಾಳ, ಜಮಖಂಡಿ ತಾಲ್ಲೂಕು | ಸಲಕರಣೆ ಖರೀದಿ | 102268-00 |
| 49 | ಬಾಗಲಕೋಟೆ | ಶ್ರೀ ಶೈಲ ಮಲ್ಲಿಕಾರ್ಜುನ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ರಮೇಶ ಶಿವಪ್ಪ, ಕಮತಗಿ, ಸಾ:ಜಮಖಂಡಿ, ಹುನಗುಂದ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 258911-00 |
| 50 | ಬೆಳಗಾವಿ | ಅಪ್ಪಸಾಬ.ಎನ್ ತೇಲಸಂಗ ಚಾಕಿ ಸಾಕಾಣಿಕೆ ಕೇಂದ್ರ , ಶ್ರೀ ಎ.ಎನ್.ತೆಲಸಂಗ, ಐಗಳಿ, ಅಥಣಿ ತಾಲ್ಲೂಕು | ಹನಿ ನೀರಾವರಿ | 30735-00 |
| 51 | ಬೆಳಗಾವಿ | ಕೊಪ್ಪದ ಚಾಕಿ ಸಾಕಾಣಿಕಾ ಕೇಂದ್ರ , ಶ್ರೀ ಎಲ್ ಎಲ್ ಕೊಪ್ಪದ ಸಾ/ಬೆಳ್ಳಿಗೇರಿ, ಅಥಣಿ ತಾಲ್ಲೂಕು | ಸಾಕಾಣಿಕಾ ಕಟ್ಟಡ, ಸಲಕರಣೆ, ಹನಿ ನೀರಾವರಿ | 388511-00 |
| 52 | ಬೆಳಗಾವಿ | ತುಳಜಾಭವಾನಿ ಚಾಕಿ ಸಾಕಾಣಿಕೆ ಕೇಂದ್ರ , ಶ್ರೀ ಗುರಪ್ಪ ಬಾ ಎಲಿಗಾರ ಸಾ/ ಸಂಗ್ರೇಸಕೊಪ್ಪ, ಸವದತ್ತಿ ತಾಲ್ಲೂಕು | ಸಲಕರಣೆ | 21975-00 |
| 53 | ವಿಜಯಪುರ | ಶ್ರೀ ಬಸವೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಮಹಾದೇವಪ್ಪ ಶಂ ಮರೋಳ, ನಾಗೂರ, ಬಸವನ ಬಾಗೇವಾಡಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 300000-00 |
| 54 | ವಿಜಯಪುರ | ಶ್ರೀ ಮಲ್ಹಾರಿ ಪವಾರ್ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಅಶೋಕ ಮಲ್ಹಾರಿ ಪವಾರ್ ಬಿನ್ ಮಲ್ಹಾರಿ ಪವಾರ್, ಬಸವನ ಬಾಗೇವಾಡಿ, ಬಸವನ ಬಾಗೇವಾಡಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 800000-00 |
| 55 | ವಿಜಯಪುರ | ಶ್ರೀ ಬಸವೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಮಹೇಶ ಮಹಾದೇವ ಮರೋಳ ಬಿನ್ ಮಹಾದೇವ ಮರೋಳ, ಮಣ್ಣೂರು ಗ್ರಾಮ, ಬಸವನ ಬಾಗೇವಾಡಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 800000-00 |
| 56 | ವಿಜಯಪುರ | ಶ್ರೀ ತುಳಜಾ ಭವಾನಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಲೋಕೇಶ್ ಪವಾರ್ ಬಿನ್ ರಾಮು ಪವಾರ್, ಕಣಕಾಲ, ಬಸವನ ಬಾಗೇವಾಡಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 1014015-00 |

| | | | | |
|---|---|---|---|---|
| 57 | ಧಾರವಾಡ | ಶ್ರೀ ದುರ್ಗಾದೇವಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಚನ್ನಪ್ಪ ವಿರೂಪಾಕ್ಷಪ್ಪ ಹುಚ್ಚಯ್ಯ ಬಿನ್ ವಿರೂಪಾಕ್ಷಪ್ಪ, ಚಿಕ್ಕಮಲ್ಲಿಗವಾಡ, ಹುಬ್ಬಳ್ಳಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 870548-00 |
| 58 | ಗದಗ | ಶ್ರೀ ಜಗದ್ಗುರು ಫಕ್ಕೀರೇಶ್ವರ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಮಹಬೂಬ್ ಸಾಬ ಅಮೀನಸಾಬ ರೋಣದ ಬಿನ್ ಅಮೀನಸಾಬ ಬುಡ್ಡೆಸಾಬ ರೋಣದ, ಖಾನಾಪುರ ಗ್ರಾಮ, ಶಿರಹಟ್ಟಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 818811-00 |
| 59 | ಹಾವೇರಿ | ಶ್ರೀ ಮಲ್ಲಿಕಾರ್ಜುನ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ರಮೇಶ.ಬಿ. ಹೆಡಿಯಾಳ ಕುರುಬಗೊಂಡ, ರಾಣೆಬೆನ್ನೂರು ತಾಲ್ಲೂಕು | ಸಲಕರಣೆಗಳ ಖರೀದಿ | 216520-00 |
| 60 | ಹಾವೇರಿ | ಶ್ರೀ ಮಂಜುನಾಥ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ಮಂಜುನಾಥ ಬಸವಂತಪ್ಪ ಉಕ್ಕುಂದ, ವೈ.ಟಿ.ಹೊನ್ನತ್ತಿ, ರಾಣೆಬೆನ್ನೂರು ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಸಲಕರಣೆ ಖರೀದಿ | 247667-00 |
| 61 | ಹಾವೇರಿ | ಶ್ರೀ ಯಲ್ಲಮ್ಮದೇವಿ ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಶ್ರೀ ನಾಗರಾಜ ಪಾಣಿಗಟ್ಟಿ ಬಿನ್ ರಮೇಶಪ್ಪ, ಬಸಾಪೂರ, ಹಾವೇರಿ ತಾಲ್ಲೂಕು | ಚಾಕಿ ಸಾಕಾಣಿಕಾ ಕಟ್ಟಡ, ಹಿಪ್ಪುನೇರಳೆ ತೋಟ ಸ್ಥಾಪನೆ, ಸಲಕರಣೆ ಖರೀದಿ | 800000-00 |